**ಸಾಕ್ಷಿಯನ್ನು ದಿನಾಂಕಃ 17.06.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಆರ್.ಎಂ.ಎಸ್, ವಕೀಲರಿಂದಃ**

ಆರೋಪಿಗಳು ನನ್ನ ಮಾವನ ತಮ್ಮನ ಮಕ್ಕಳು. ಎಲ್ಲರೂ ಬೇರೆ-ಬೇರೆಯಾಗಿ ವಾಸ ಮಾಡುತ್ತಿದ್ದೇವೆ. ಆರೋಪಿಗಳ ಕುಟುಂಬದವರು ಕೂಡ ಬೇರೆ-ಬೇರೆ ವಾಸ ಮಾಡುತ್ತಿದ್ದಾರೆ. ನಮ್ಮ ಮತ್ತು ಆರೋಪಿಗಳ ಮನೆ ಅಕ್ಕ-ಪಕ್ಕದಲ್ಲಿರುತ್ತವೆ. ಆರೋಪಿಗಳು ಶೌಚಾಲಯ ನಿರ್ಮಿಸಿ, ಸಹಾಯಧನ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಹಾಯಧನ ಕೊಡುವ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಯವರು ಸ್ಥಳವನ್ನು ಪರಿಶೀಲಿಸುತ್ತಾರೆ ಎಂದರೆ ಯಾರು ಬಂದಿರಲಿಲ್ಲ. ಶೌಚಾಲಯ ನಿರ್ಮಿಸುವಾಗ ನಾನು ತಡೆದಿರುತ್ತೇನೆ. ಸದರಿ ಶೌಚಾಲಯ ಸ್ವಾಮಿ ಎಂಬುವವರಿಗೆ ಸೇರಿರುತ್ತದೆ. ನಾನು ಸ್ವಾಮಿಯವರನ್ನು ಇಲ್ಲಿ ಶೌಚಾಲಯ ಕಟ್ಟಬೇಡಿ ಎಂದು ಹೇಳಿರುತ್ತೇನೆ. ನಾನು ಕೇಳಲು ಹೋದಾಗ ನನ್ನ ಗಂಡ ಜಮೀನಿನ ಬಳಿ ದನ ಮೇಯಿಸಲು ಹೋಗಿದ್ದರು. ಗಲಾಟೆ ನಡೆಯಿತು ಎಂದು ಹೇಳಿದ ಸ್ಥಳದಿಂದ ಜಮೀನಿಗೆ 1 ಕಿ.ಮೀ ದೂರ ಇರುತ್ತದೆ. ಜಮೀನಿನಿಂದ ಮನೆಗೆ ಬರಲು ಸುಮಾರು ಒಂದೂವರೆ ಗಂಟೆ ಬೇಕಾಗುತ್ತದೆ. ನನ್ನ ಗಂಡ ಬೆಳಿಗ್ಗೆ ಜಮೀನಿನ ಬಳಿ ಹೋದರೆ ಸಂಜೆ ಮನೆಗೆ ಬರುತ್ತಾರೆ. ಶೌಚಾಲಯ ಕಟ್ಟಿರುವ ಜಾಗ ಆರೋಪಿಗಳಿಗೆ ಸೇರಿದ ಜಾಗವಾಗಿರುತ್ತದೆ ಎಂದರೆ ಸರಿಯಲ್ಲ. ನಾನೇ ಆರೋಪಿಗಳ ಮೇಲೆ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಆರೋಪಿಗಳು ನನ್ನ ವಿರುದ್ಧ ದೂರು ನೀಡಿದ್ದು, ಪೊಲೀಸರು ನನ್ನನ್ನು ಕರೆದು ಬುದ್ಧಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆದರೂ ನಾನೇ ಠಾಣೆಗೆ ಹೋಗಿ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಗಲಾಟೆ ಮಾಡಿಲ್ಲ ಮತ್ತು ಯಾವುದೇ ರೀತಿ

ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾರೂ ಕೂಡ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಪೊಲೀಸರು ರಾತ್ರಿ 7.30 ಗಂಟೆ ಸಮಯದಲ್ಲಿ ಬಂದಿದ್ದರು. ಅಲ್ಲಿ ಪೊಲೀಸರು ಬರವಣಿಗೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಮುದ್ದೆ ಮಾಲುಗಳನ್ನು ನಾನೇ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ ಎಂದರೆ ಪೊಲೀಸರು ಮಹಜರ್ ಮಾಡಲು ಬಂದಾಗ ಮನೆಯಲ್ಲಿಟ್ಟಿದ್ದು, ಅವುಗಳನ್ನು ತೆಗೆದುಕೊಟ್ಟಿರುತ್ತೇನೆ. ಪೊಲೀಸರು ಸ್ಥಳಕ್ಕೆ ಬಂದು ಯಾವುದೇ ಮಹಜರ್ ಮಾಡದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗು ಮತ್ತು ಆರೋಪಿಗಳ ನಡುವೆ ವೈಮನಸ್ಸು ಇರುವುದರಿಂದ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**